ಪಹಲ್ಗಾಮ್ ಭೀಕರ ಹತ್ಯಾಕಾಂಡಕ್ಕೆ ಉತ್ತರದ ರೂಪದಲ್ಲಿ ಪಾಕಿಸ್ತಾನದಲ್ಲಿನ ಉಗ್ರರ ನೆಲೆಗಳ ಮೇಲೆ ಭಾರತ ನಡೆಸಿದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ಸಂದರ್ಭದಲ್ಲಿ ಮತ್ತೆ ಮತ್ತೆ ಚರ್ಚೆಗೊಳಗಾದ ವಿಷಯ – 'ಅಣುಶಕ್ತಿ'. ಎರಡು ದೇಶಗಳ ನಡುವಣ ಸಂಘರ್ಷ ಅಣು ಬಾಂಬ್‌ಗಳ ಬಳಕೆಗೆ ಕಾರಣವಾಗಬಹುದು ಎನ್ನುವ ಆತಂಕ ಚರ್ಚೆಗೆ ಕಾರಣವಾಗಿತ್ತು. ಆದರೆ, ಅಣುಶಕ್ತಿಯ ದುರ್ಬಳಕೆ ಕುರಿತಂತೆ ಭಾರತದ ನಿಲುವು ಸ್ಪಷ್ಟವಾಗಿದೆ. ಶಾಂತಿಯ ರೂಪದಲ್ಲೂ ಅಣುಶಕ್ತಿಯನ್ನು ಹೇಗೆ ನಿರ್ವಹಿಸಬಹುದು ಎನ್ನುವುದಕ್ಕೆ ಭಾರತ ವಿಶ್ವಕ್ಕೇ ಮಾದರಿ. ಈ ಮಾದರಿಯನ್ನು ವಿಶ್ಲೇಷಿಸುವ ಈ ಬರಹ, ಅಣು ವಿದ್ಯುತ್ ಶಕ್ತಿಯ ಸಾಧ್ಯತೆಗಳು ಹಾಗೂ ಅದರ ಪರಿಣಾಮಗಳ ಬಗ್ಗೆ ಸಹೃದಯರ ಗಮನಸೆಳೆಯುತ್ತಿದೆ. ಜೂನ್ 5ರ 'ವಿಶ್ವ ಪರಿಸರ ದಿನ'ಕ್ಕೆ ಮುನ್ನುಡಿ ರೂಪದಲ್ಲಿರುವ ಈ ಅಣು ಜಿಜ್ಞಾಸೆ, ವರ್ತಮಾನಕ್ಕೆ ಜರೂರಾದ ಪರಿಸರ ಸಂರಕ್ಷಣೆಯ ಅಗತ್ಯವನ್ನು ಪ್ರತಿಪಾದಿಸುತ್ತಿದೆ.

**■ ಗುರುರಾಜ ಎಸ್. ದಾವಣಗೆರೆ**

